ಪಿಡಬ್ಲ್ಯೂ: 1 ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ದಿಃ 28-03-2025

ಪಾಟೀ ಸವಾಲು : ಆರೋಪಿ ಪರಃ ಶ್ರೀ ಎಮ್ ಐ ಕೆ ವಕೀಲರಿಂದಃ

ಅಪಘಾತ ಸ್ಥಳದಿಂದ ನಾನು ಇರುವ ಮನೆಗೆ 12 ಮೀ ದೂರ ಇದೆ. ಅಪಘಾತ ಸ್ಥಳ ಸಾಕಷ್ಟು ಜನ ಸಂದಣಿ ಇರುವ ಪ್ರದೇಶ ಮತ್ತು ಅನೇಕ ವಾಹನಗಳು ಓಡಾಡುತ್ತಿರುತ್ತವೆ ಎಂದರೆ ಸರಿ. ಸಾಮಾನ್ಯವಾಗಿ ಅಪಘಾತವಾದಾಗ ಅಪಘಾತಪಡಿಸಿದ ವ್ಯಕ್ತಿ ಸ್ಥಳದಲ್ಲಿ ಇದ್ದರೆ ಅವನ ಮೇಲೆ ಸಾರ್ವಜನಿಕರು ಹಲ್ಲೆ ಮಾಡುವ ಸಾಧ್ಯತೆ ಇರುತ್ತದೆ ಎಂದರೆ ಸರಿ. ದೂರು ನೀಡಿದ ದಿನ ಆರೋಪಿಯನ್ನು ಠಾಣೆಯಲ್ಲಿ ನೋಡಿರುವುದಿಲ್ಲ. ಆರೋಪಿಯನ್ನು ಮತ್ತು ಅಪಘಾತ ಪಡಿಸಿದ ಬೈಕ್ ಅನ್ನು ಮೊದಲಬಾರಿಗೆ ಪೋಲಿಸ್ ಠಾಣೆಯಲ್ಲಿ ಡಿಸೆಂಬರ್ 2 ರ ಬೆಳಿಗ್ಗೆ ನೋಡಿರುತ್ತೇನೆ. ಠಾಣೆಗೆ ನಾನು ಒಬ್ಬನೇ ಹೋಗಿರುತ್ತೇನೆ. ಅಪಘಾತ ಸ್ಥಳವನ್ನು ಚಾಸಾ 2 ರವರು ಪೋಲಿಸ್ ರವರಿಗೆ ತೋರಿಸಿರುತ್ತಾರೆ. ಶವಮಹಜರು ನಡೆಯುವಾಗ ನಾನು ವೆನ್ಲಾಕ್ ಆಸ್ಪತ್ರೆಯಲ್ಲಿ ಇದ್ದೆ. ದೂರನ್ನು 28 ರ ಬೆಳಿಗ್ಗೆ ನೀಡಿರುತ್ತೇನೆ. ದೂರನ್ನು ನಾನೇ ಬರೆದಿರುತ್ತೇನೆ. ಪೋಲಿಸರು 4-4.45 ಗಂಟೆಗೆ ಬಂದಿರುತ್ತಾರೆ. ಪೋಲಿಸರು ಸ್ಥಳಕ್ಕೆ ಲಾಪ್ ಟಾಪ್ ಮತ್ತು ಪ್ರಿಂಟರ್ ತೆಗೆದುಕೊಂಡು ಬಂದಿರುತ್ತಾರೆ. ತಕ್ಷೀರು ಸ್ಥಳದಲ್ಲಿ 1 ಸಹಿ ಮಾಡಿರುತ್ತೇನೆ. ಮಹಜರಿನಲ್ಲಿ ಏನೂ ಬರೆದಿರುತ್ತಾರೆ ಎಂದು ಈಗ ನನಗೆ ನೆನಪಿಲ್ಲ. ಮೃತರ ಮಕ್ಕಳು ಮಂಗಳೂರು ನ್ಯಾಯಾಲಯದಲ್ಲಿ ವಿಮಾ ಪರಿಹಾರಕ್ಕೆ ಅರ್ಜಿ ಹಾಕಿರುತ್ತಾರೆ ಎಂದರೆ ಸರಿ. ಪೋಲಿಸರು ನನ್ನ ಸಮಕ್ಷಮ ಮಹಜರು ಮತ್ತು ಸ್ವತ್ತು ಸ್ವಾಧೀನತಾ ಮಹಜರನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ನಾನು ಪೋಲಿಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಮು ಮಾ ಕ್ಕೂ, ಪ್ರಕರಣಕ್ಕೂ, ಆರೋಪಿಗೂ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ., ಕಾರ್ಕಳ